ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/19/ಯು-ರೆಡ್‌ಕ್ರಾಸ್/2012-13

ಸಂಯೋಜನಾಧಿಕಾರಿಯವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-560001
ದಿನಾಂಕ; 07-07-2018

**ಜ್ಞಾಪನ**

**ವಿಷಯ:** ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಾಧಿಕಾರಿಯನ್ನು ಯೂತ್‌ರೆಡ್‌ಕ್ರಾಸ್ ಜವಾಬ್ದಾರಿಯಿಂದ ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:** ರಾಜ್ಯಎನ್.ಎಸ್.ಎಸ್.ಅಧಿಕಾರಿಯವರ ಪತ್ರ ಸಂಖ್ಯೆ:ಯುಸೇಇ/ರಾಸೇಯೋ/ಸಾಮಾನ್ಯ/2018-19/107 ದಿನಾಂಕ: 03-06-2018

*****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಕೆಲವು ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಕ್ರಮವಾಗಿ ಕಾರ್ಯಕ್ರಮಾಧಿಕಾರಿಗಳು ರಾಷ್ಟ್ರೀಯ ಸೇವಾ ಯೋಜನೆಯ ಜವಾಬ್ದಾರಿಯೊಂದಿಗೆ ಯುವರೆಡ್ ಕ್ರಾಸಿನ ಜವಬ್ದಾರಿಯನ್ನೂ ಹೊಂದಿರುವುದು ಕಂಡುಬಂದಿದೆ. ಕಳೆದ 3 ವರ್ಷದಿಂದ ಯೂತ್‌ರೆಡ್‌ಕ್ರಾಸ್ ನ ಚಟುವಟಿಕೆಗಳು ಇದರಿಂದ ಪ್ರಗತಿ ಕಂಡಿಲ್ಲ ಎಂಬುದನ್ನು ಯೂತ್‌ರೆಡ್‌ಕ್ರಾಸ್ ಸಂಸ್ಥೆಯ ಅಧ್ಯಕ್ಷರು ವ್ಯಕ್ತ ಪಡಿಸಿದ್ದಾರೆ. ರಾಷ್ಟ್ರೀಯ ಸೇವಾ ಯೋಜನೆಯ ಜವಾಬ್ದಾರಿಯು ಹೆಚ್ಚಿನ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಅಂಶಕಾಲಿಕವಾಗಿರುವುದರಿಂದ ಅದರೊಂದಿಗೆ ಬೇರೆ ಜವಬ್ದಾರಿಯನ್ನು ವಹಿಸಿಕೊಂಡಲ್ಲಿ ಎರಡೂ ಸಂಸ್ಥೆಗಳಿಗೆ ನ್ಯಾಯ ಒದಗಿಸಲು ಸಾಧ್ಯವಾಗುವುದಿಲ್ಲ ಎಂದು ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಖಚಿತ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ರಾಷ್ಟ್ರೀಯ ಸೇವಾ ಯೋಜನೆಯ ಚಟುವಟಿಕೆಗಳಲ್ಲಿ ಇದನ್ನು ಗುರುತಿಸಲಾಗಿದೆ.

ಮುಂದುವರಿದು, 2018-19ನೇ ಸಾಲಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಾಧಿಕಾರಿಗಳು ಯೂತ್ ರೆಡ್ ಕ್ರಾಸ್‌ನ ಜವಾಬ್ದಾರಿಯನ್ನು ವಹಿಸಿಕೊಳ್ಳದಿರುವಂತೆ ನೋಡಿಕೊಳ್ಳಲು ಸೂಚಿಸಲಾಗಿದೆ. ಈಗಾಗಲೇ ಈ ಜವಾಬ್ದಾರಿಯನ್ನುನ ಹೊಂದಿದ ಕಾರ್ಯಕ್ರಮಾಧಿಕಾರಿಗಳನ್ನು ತಕ್ಷಣವೇ ಸದರಿ ಜವಾಬ್ದಾರಿಯಿಂದ ಬಿಡುಗಡೆ ಮಾಡುವುದು. ಒಂದು ವೇಳೆ ಈ ಜವಾಬ್ದಾರಿ ಹೊಂದಿರುವ ಕಾರ್ಯಕ್ರಮಾಧಿಕಾರಿಗಳು ಯೂತ್‌ರ್ರೆಡ್‌ಕ್ರಾಸ್ ನಲ್ಲೇ ಮುಂದುವರಿಯುವುದಾದರೇ, ಅವರನ್ನು ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಾಭಾರದಿಂದ ತಕ್ಷಣವೇ ಬಿಡುಗಡೆಗೊಳಿಸಿ ಅರ್ಹರನ್ನು ನೇಮಿಸಲು ಪ್ರಾಚಾರ್ಯರು ಸೂಕ್ತ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ಇಲಾಖೆಗೆ ಕಳುಹಿಸಲು ಸೂಚಿಸಲಾಗಿದೆ.

ನಿರ್ದೇಶಕರು

ಇವರಿಗೆ ,

1) ನಿರ್ದೇಶನಾಲಯಕ್ಕೊಳಪಡುವ ರಾಜ್ಯದಎಲ್ಲಾತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ -ಸೂಕ್ತ ಕ್ರಮಕ್ಕಾಗಿ
2) ರಾಜ್ಯಎನ್.ಎಸ್.ಎಸ್.ಅಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದಜಂಟಿ ಕಾರ್ಯದರ್ಶಿ, ರಾಷ್ಟ್ರೀಯ ಸೇವಾ ಯೋಜನಾ ಕೋಶ, ಬೆಂಗಳೂರು ಇವರ ಮಾಹಿತಿಗಾಗಿ
3) ಇ-ಗೌರ್ನರ್ಸ್ ಇಲಾಖಾ ಅಂತರ್ಜಾಲತಾಣದಲ್ಲಿ ಪ್ರಕಟಿಸಲು.
4) ಕಚೇರಿಕಡತಕ್ಕೆ